# ನನ್ನ ಅಮರನಾಥ ಯಾತ್ರೆ

**ಸ್ವಾಮಿ ಮಂಗಳಾತ್ಮಾನಂದ**

ಪ್ರತಿವರ್ಷವೂ ಶ್ರಾವಣ ಮಾಸದಲ್ಲಿ ನಡೆಯುವ ಅಮರನಾಥ ಯಾತ್ರೆಯು ಅತ್ಯಂತ ಪ್ರಸಿದ್ಧವೂ, ಆಧ್ಯಾತ್ಮಿಕ ಮಹಿಮೆಯಿಂದ ಕೂಡಿದ್ದೂ ಆಗಿದೆ. ಸ್ವಾಮಿ ವಿವೇಕಾನಂದರ ಅಮರನಾಥ ಯಾತ್ರೆಯ ನಂತರ ರಾಮಕೃಷ್ಣ ಸಂಪ್ರದಾಯದಲ್ಲಿ ಈ ಯಾತ್ರೆಗೆ ಹೆಚ್ಚಿನ ಮಹತ್ವವಿದೆ. ಇಲ್ಲಿ ಲೇಖಕರು ತಮ್ಮ ಯಾತ್ರೆಯ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅವರು ವಾರಾಣಸಿಯ ರಾಮಕೃಷ್ಣ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದಿರುವ ಅವರು ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.



ಸಾಮಾನ್ಯವಾಗಿ ಪ್ರವಾಸ, ತಿರುಗಾಟಗಳನ್ನು ಎಲ್ಲರೂ ಇಷ್ಟಪಡುತ್ತಾರೆ. ಕಾರಣ ಮನುಷ್ಯನ ಮನಸ್ಸು ಚಂಚಲ; ಮನಸ್ಸು ಎಲ್ಲೆಲ್ಲಿಗೆ ಕರೆದುಕೊಂಡು ಹೋಗುತ್ತದೋ ಅಲ್ಲೆಲ್ಲ ತಿರುಗಾಡುತ್ತಾರೆ ಜನ. ಆದರೆ ತೀರ್ಥಯಾತ್ರೆಯನ್ನು ಎಲ್ಲರೂ ಇಷ್ಟಪಡುವುದಿಲ್ಲ. ತೀರ್ಥಯಾತ್ರೆ ಎಂದರೆ ಬರಿ ತಿರುಗಾಟವಲ್ಲ; ತನ್ನ ಆಧ್ಯಾತ್ಮಿಕ ಉನ್ನತಿಗಾಗಿ ಕಷ್ಟಪಡುವುದು. ಹಾಗಾಗಿ ಸಾಧುಗಳು, ಸಜ್ಜನರು ತೀರ್ಥಯಾತ್ರೆ ಮಾಡುತ್ತಾರೆ. ನಾವು ಬಹುಶಃ ನಾರದ ಮಹರ್ಷಿಗಳನ್ನು ಸಂಚಾರ ಮಾಡುವುದರಲ್ಲಿ ಮೊದಲನೇ ಸ್ಥಾನದಲ್ಲಿಡಬಹುದು. ಏಕೆಂದರೆ ಅವರು ಜಗತ್ತಿನ ಹಿತಕ್ಕಾಗಿ, ತ್ರಿಲೋಕ ಸಂಚಾರ ಮಾಡುತ್ತಿದ್ದರು. ನಾರದ ಮಹರ್ಷಿಗಳನ್ನು ಜಗತ್ತಿನ ಮೊದಲ ಪತ್ರಿಕೋದ್ಯಮಿ, ಪತ್ರಿಕೋದ್ಯೋಗಿ ಎಂದರೂ ತಪ್ಪಾಗಲಿಕ್ಕಿಲ್ಲ. ಹಿಂದಿನ ಕಾಲದಲ್ಲಿ ಸಾಧುಸಂನ್ಯಾಸಿಗಳು ಅಖಂಡ ಭಾರತದಲ್ಲಿ ಪರಿವ್ರಾಜಕರಾಗಿ ಹೋಗುವಾಗ, ವಿವಿಧೆಡೆಗಳಿಂದ ಸಮಾಚಾರಗಳನ್ನು ಕೂಡ ಹೊತ್ತುಕೊಂಡು ಹೋಗುತ್ತಿದ್ದರು.

ಪ್ರಾಪಂಚಿಕರು ಕೂಡ ತೀರ್ಥಯಾತ್ರೆ ಎಂಬ ಹೆಸರಿನಲ್ಲಿ ಪ್ರವಾಸ ಮಾಡಿ ಮೋಜು ಮಸ್ತಿಗಳಲ್ಲಿ ಕಾಲಕಳೆಯುತ್ತಾರೆ. ಪರಿಸರವನ್ನು ಕೆಡಿಸಿ ಭಾರತೀಯ ಸಂಸ್ಕೃತಿಗೆ ಕೊಡಲಿ ಏಟು ಹಾಕುತ್ತಿದ್ದಾರೆ. ದೇವಸ್ಥಾನದ ಪರಿಸರದ ಆಚಾರ-ವಿಚಾರಗಳನ್ನು ಕೆಡಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ವಿಶೇಷವಾಗಿ ಆಧುನಿಕ ವಿದ್ಯೆ ಪಡೆದವರು ಇದನ್ನು ಮಾಡುವುದನ್ನು ನಾವು ನೋಡುತ್ತಿದ್ದೇವೆ. ದೇವಸ್ಥಾನಗಳಿಗೆ ಹೋಗುವಾಗ ಬಟ್ಟೆ-ವೇಷ ಭೂಷಣಗಳಲ್ಲಿ ಕೂಡ ಶಿಷ್ಟಾಚಾರವನ್ನು ಪಾಲಿಸುತ್ತಿಲ್ಲ. ಭಗವದ್ಭಕ್ತಿಯಿಂದ ತೀರ್ಥಯಾತ್ರೆ ಮಾಡುವವರು ಸಂಸ್ಕೃತಿಯನ್ನು, ಸನಾತನ ಧರ್ಮವನ್ನು ಬೆಳೆಸುತ್ತಾರೆ.

ಭರತಖಂಡದಲ್ಲಿ ಪ್ರತಿಯೊಂದು ಪರ್ವತಕ್ಕೂ, ನದಿಗೂ ಪ್ರಾಮುಖ್ಯತೆ ಇದೆ. ನಮಗೆ ಪರ್ವತವು ಬರೀ ದಿಬ್ಬವಲ್ಲ; ನದಿ ಎಂದರೆ ಬರಿ ನೀರಲ್ಲ. ಪರ್ವತದ ತಪ್ಪಲಲ್ಲಿ ನದೀತೀರದಲ್ಲಿ ಸಾಧುಸಂತರು ತಪಸ್ಸು ಮಾಡುತ್ತಾರೆ. ಈಗಿನ ಪ್ರಕ್ಷುಬ್ಧ ವಾತಾವರಣದಲ್ಲಿ ಕೂಡ ಯುವಕರು ಗಂಗಾ, ನರ್ಮದಾ, ಗೋದಾವರಿ, ಕಾವೇರೀ ತಟಗಳಲ್ಲಿ ಪರ್ವತ ಪ್ರದೇಶಗಳಲ್ಲಿ ತಪಸ್ಸು ಮಾಡುವುದನ್ನು ನಾವು ನೋಡುತ್ತೇವೆ.

ಕನ್ನಡದಲ್ಲಿ 'ದೇಶ ಸುತ್ತು – ಕೋಶ ಓದು' ಎಂಬ ನಾಣ್ಣುಡಿ ಇದೆ. ಅಕ್ಷರಜ್ಞಾನವಿಲ್ಲದವನು ಪಶುವಿಗೆ ಸಮಾನ, ಅವನು ಬರಿ ದುಡಿಯಲು ಸೀಮಿತವಷ್ಟೆ. ಕೋಶ, ಪುಸ್ತಕ ಓದಿದರೆ ಜ್ಞಾನ ಬರುತ್ತದೆ. ದೇಶ ಸುತ್ತು ಎಂದರೆ ತೀರ್ಥಯಾತ್ರೆ ಮಾಡುವುದು. ಕರ್ಣಾಟಕದ ದಾಸವರೇಣ್ಯರು ಹೇಳಿದ್ದಾರೆ – 'ಮಾನವ ಜನ್ಮ ಬಲುದೊಡ್ಡದು, ಅದ ಹಾನಿ ಮಾಡಲುಬೇಡಿ ಹುಚ್ಚಪ್ಪಗಳಿರಾ.' ಇಲ್ಲಿ ಇದೇ ಉದ್ದೇಶ; ಭಜನೆ ಮಾಡಿ, ತೀರ್ಥಯಾತ್ರೆ ಮಾಡಿ ಎಂದು ಭಕ್ತರು ಭಜನೆ ಮಾಡುತ್ತ, ತಾಳ ಹಾಕಿ ನೃತ್ಯ ಮಾಡುತ್ತ ದೇವಸ್ಥಾನಗಳಿಗೆ ಹೋಗುತ್ತಾರೆ. ಇದನ್ನು ನೋಡಿದವರಲ್ಲಿ ಕೂಡ, ಪರಮಾರ್ಥ ಜ್ಞಾನ ಅಭಿವೃದ್ಧಿ ಆಗುತ್ತದೆ. ಇದಕ್ಕೆ ಉದಾಹರಣೆ ಪಂಢರಾಪುರದ ವಾರ್ಕರೀ ಸಂಪ್ರದಾಯದ ಭಕ್ತರು.

ಈಗೀಗ ತೀರ್ಥಯಾತ್ರೆ ಎಂಬುದು ಕರತಲಾಮಲಕವಾಗಿದೆ! ನೂರು ವರ್ಷಗಳ ಹಿಂದೆ, ಜನರು ವರ್ಷಾನುಗಟ್ಟಲೆ ನಡೆದುಕೊಂಡು ತೀರ್ಥಕ್ಷೇತ್ರ ದರ್ಶನ ಮಾಡುತ್ತಿದ್ದರು. ಉಡುಪಿಯಿಂದ ತಿರುಪತಿಗೆ ಹೋಗುವವರಿಗೆ ಸುಮಾರು ಒಂದು ವರ್ಷ ಹಿಡಿಯುತ್ತಿತ್ತು. ಯಾತ್ರೆಗೆ ಹೋಗುತ್ತಿದ್ದವರು ಹಿಂದಿರುಗಿ ಬರುತ್ತಾರೆಂಬ ಖಾತ್ರಿ ಇರುತ್ತಿರಲಿಲ್ಲವಾದ್ದರಿಂದ ಯಾತ್ರೆ ಹೋಗುವ ಮೊದಲು ಊರಿನವರಿಗೆ ಅನ್ನಸಂತರ್ಪಣೆ ಕೊಟ್ಟು ಹೋಗುತ್ತಿದ್ದರು. ಈಗಂತೂ ಎರಡು ವರ್ಷ ಹಿಡಿಯುವ ತೀರ್ಥಯಾತ್ರೆಯು ಎರಡು ದಿನಗಳಲ್ಲಿ ಮುಗಿಯುತ್ತದೆ. ಇದು ಆಡಂಬರವಾಗಿ ಭಕ್ತಿಯ ಅಭಾವವನ್ನು ನೋಡುತ್ತಿದ್ದೇವೆ. ಈಗೀಗ ನರ್ಮದಾ ಪರಿಕ್ರಮವನ್ನು ವಾಹನದಲ್ಲಿ ಹತ್ತುದಿನಗಳಲ್ಲಿ ಮುಗಿಸುತ್ತಿದ್ದಾರೆ. ಇಲ್ಲಿ ಕೂಡ ನಾವು ಭಕ್ತಿ ಮತ್ತು ತಪಸ್ಸಿನ ಅಭಾವವನ್ನು ನೋಡಬಹುದು.

ತೀರ್ಥಯಾತ್ರೆ ಮಾಡುವವರು ಗಮ್ಯಸ್ಥಾನದ ಇತಿಹಾಸ, ಪುರಾಣ, ಕ್ಷೇತ್ರಮಹಿಮೆಯನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದರೆ

ಅವರ ಭಕ್ತಿಯು ಇಮ್ಮಡಿ ಆಗುತ್ತದೆ. ಆದರೆ ಸಂಶೋಧನಾ ವಿದ್ಯಾರ್ಥಿಯ ಹಾಗೆ ಆಗಬಾರದು. ಸಂಶೋಧನ ವಿದ್ಯಾರ್ಥಿಯು ಒಬ್ಬ ಶುಷ್ಕಜ್ಞಾನಿ ಆಗುತ್ತಾನೆ. ಶ್ರೀರಾಮಕೃಷ್ಣ ಪರಮಹಂಸರು ಹೇಳುತ್ತಾರೆ – 'ಅಯ್ಯಾ, ನೀನು ಮಾವಿನ ಹಣ್ಣನ್ನು ತಿನ್ನಲು ಬಂದಿದ್ದೀ, ಅದು ಬಿಟ್ಟು ತೋಟದಲ್ಲಿ ಮರಗಳು ಎಷ್ಟಿವೆ, ಮರದ ಎಲೆಗಳ ಲೆಕ್ಕ ಏಕೆ ಹಾಕುವೆ?'

ಅಖಂಡ ಭಾರತವನ್ನು ಒಗ್ಗೂಡಿಸಿ, ಭಕ್ತರನ್ನು ಬಂಧನದಲ್ಲಿರಿಸಿದ್ದು ಭಕ್ತಿ ಒಂದೇ. ಈ ಭಕ್ತನಿಗೆ ವರ್ಣ, ಜಾತಿ, ಭಾಷೆ, ದೇಶ, ರಾಜ್ಯ ಯಾವ ಭೇದವೂ ಇಲ್ಲ. ಪ್ರಾದೇಶಿಕ ಭಾಷೆ ಬರದಿದ್ದರೂ ಭಕ್ತರನ್ನು ಪ್ರತಿಯೊಂದು ತೀರ್ಥಕ್ಷೇತ್ರದಲ್ಲಿ ನೋಡಬಹುದು.

ಆಚಾರ್ಯ ಶಂಕರರು ಅಖಂಡ ಭಾರತವನ್ನು ಎರಡು ಸಲ ಕಾಲ್ನಡಿಗೆಯಲ್ಲಿ ಯಾತ್ರೆ ಮಾಡಿದ್ದಾರೆ; ಅವರ ಆಯುಷ್ಯ ಬರೀ ಮೂವತ್ತೆರಡು ವರ್ಷ. ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಚೈತನ್ಯ ಮಹಾಪ್ರಭುಗಳು, ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು, ಶ್ರೀಮಾತೆ ಶಾರದಾದೇವಿಯವರು ಇವರೆಲ್ಲ ಭಾರತದ ತೀರ್ಥಯಾತ್ರೆಗಳನ್ನು ಮಾಡಿದ್ದಾರೆ.

ನಾರದ ಭಕ್ತಿ ಸೂತ್ರದಲ್ಲಿ ಒಂದು ಸೂತ್ರ ಹೇಳುತ್ತದೆ: '**ತೀರ್ಥೀಕುರ್ವಂತಿ ತೀರ್ಥಾನಿ, ಸುಕರ್ಮೀಕುರ್ವಂತಿ ಕರ್ಮಾಣಿ, ಸಚ್ಛಾಸ್ತ್ರೀಕುರ್ವಂತಿ ಶಾಸ್ತ್ರಾಣಿ**' *(ನಾ.ಭ.ಸೂ., ೬೯)* ಸಂಸಾರಿಗಳು ಪವಿತ್ರ ಕ್ಷೇತ್ರಗಳಿಗೆ ಹೋಗಿ ಭಗವಂತನಿಗೆ ಹರಕೆ ಹೊತ್ತುಕೊಳ್ಳುತ್ತಾರೆ. ಬೇಕುಗಳ ದೊಡ್ಡಪಟ್ಟಿಯನ್ನೇ ಭಗವಂತನಿಗೆ ಒಪ್ಪಿಸುತ್ತಾರೆ. ತಾವು ಮಾಡಿದ ಪಾಪಕರ್ಮಗಳಿಂದ ಪವಿತ್ರ ಕ್ಷೇತ್ರಗಳನ್ನೂ ಕಲುಷಿತಗೊಳಿಸುತ್ತಾರೆ. ಹೀಗೆ ಕಲುಷಿತಗೊಂಡ ಕ್ಷೇತ್ರಗಳನ್ನು ಸಾಧುಗಳು ತಮ್ಮ ಪಾದಸ್ಪರ್ಶದಿಂದ ಪುನಃ ಪವಿತ್ರಗೊಳಿಸುತ್ತಾರೆ. ಸಾಧುಗಳು ಓಡಾಡಿದ ಜಾಗವೆಲ್ಲ ಪವಿತ್ರಗೊಳ್ಳುತ್ತವೆ. ತೀರ್ಥ ಎಂಬುದಕ್ಕೆ ಅರ್ಥ–ಸಂಸಾರದಿಂದ ತರಣ ಮಾಡುವುದು ಎಂದು. ಸಾಧುಗಳು ಕೂತು ತಪಸ್ಸು ಮಾಡಿದ ಜಾಗಗಳೂ ಕೂಡ ಪವಿತ್ರ ಕ್ಷೇತ್ರಗಳಾಗುತ್ತವೆ. ಇದಕ್ಕೆ ಉತ್ತಮ ಉದಾಹರಣೆ ವಂಗ ದೇಶದ ಹಳ್ಳಿಗಳಾದ ಕಾಮರಾಪುಕುರ, ಜಯರಾಂಬಾಟಿ, ಬೇಲೂರು ಮಠ. ರಮಣ ಮಹರ್ಷಿಗಳು ತಪಸ್ಸು ಮಾಡಿದ ತಿರುವಣ್ಣಾಮಲೆಯು ಇವತ್ತು ಬಹು ದೊಡ್ಡ ತೀರ್ಥಕ್ಷೇತ್ರವಾಗಿದೆ. ಸಂಸ್ಕೃತದ ಒಂದು ಸುಭಾಷಿತ ಹೇಳುತ್ತದೆ – ಇತರೆಡೆ ಮಾಡಿದ ಪಾಪಕಾರ್ಯಗಳನ್ನು ಪುಣ್ಯಕ್ಷೇತ್ರಗಳಿಗೆ ಹೋಗಿ ಪರಿಹರಿಸಬಹುದು. ಪುಣ್ಯಕ್ಷೇತ್ರಗಳಲ್ಲಿ ಮಾಡಿದ ಪಾಪಗಳಿಗೆ ಪರಿಹಾರವೇ ಇಲ್ಲ. ಇದು ಸತ್ಯ ಕೂಡ. ಕೆಲವು ತೀರ್ಥಕ್ಷೇತ್ರಗಳಲ್ಲಿ ವ್ಯಾಪಾರಿಗಳು ದುಪ್ಪಟ್ಟು ಹಣ ಕೇಳುವುದು, ಕ್ಷೇತ್ರದ ಸಿಬ್ಬಂದಿ ವರ್ಗವೆ ಭಕ್ತರ ಹತ್ತಿರ ಹಣ ಲಪಟಾಯಿಸುವುದು ದೊಡ್ಡ ನೋಟು ಹಿಡಿದವರಿಗೆ ಮೊದಲು ತೀರ್ಥ–ಪ್ರಸಾದ ಇತ್ಯಾದಿ.

ನದಿಗಳು ನಮಗೆ ಬಹಳ ಪವಿತ್ರವಾಗಿವೆ. ನೀರು ನಮ್ಮ ಜೀವದಾತ. ಅದಕ್ಕಾಗಿ ನೀರಿಗೆ 'ಜೀವನ' ಎನ್ನುವ ಹೆಸರು ಕೊಟ್ಟಿದ್ದಾರೆ. ತೀರ್ಥವು ಮನಸ್ಸಿನ ಕೊಳೆ ತೆಗೆದು ನಿರ್ಮಲಮಾಡುವಂತದ್ದು. ಪುರಂದರದಾಸರು ಮಾರ್ಮಿಕವಾಗಿ ಒಂದು ಹಾಡಿನ ಮೂಲಕ ನಮ್ಮನ್ನು ಎಚ್ಚರಿಸಿದ್ದಾರೆ. 'ಮನಶುದ್ಧಿ ಇಲ್ಲದವಗೆ ಮಂತ್ರದ ಫಲವೇನು, ತನುಶುದ್ಧಿ ಇಲ್ಲದವಗೆ ತೀರ್ಥದ ಫಲವೇನು, ಮಿಂದಲ್ಲಿ ಫಲವೇನು, ಮೀನು ಮೊಸಳೆಯಂತೆ...' ವಂಚನೆ, ಮೋಸ, ಹೊಟ್ಟೆಕಿಚ್ಚು, ಚಾಡಿಕೋರತನ, ಮಿಥ್ಯಾವಾದ ಇವುಗಳಿರುವವರ ಮನಸ್ಸಿನ ಕೊಳೆ ತೊಳೆಯಲು ಸಾಧ್ಯವಿಲ್ಲ. ಇವರು ಎಷ್ಟೇ ಪಾರಾಯಣ ಮಾಡಲಿ, ಜಪಮಾಲೆ ತಿರುಗಿಸಲಿ ಅಥವ ಕಂಡ ಕಂಡ ದೇವರುಗಳಿಗೆ ನಮಸ್ಕರಿಸಲಿ, ಅವರಂತೂ ಹಾಗೆಯೇ ಇರುತ್ತಾರೆ. ಶ್ರೀರಾಮಕೃಷ್ಣರು ಹೇಳುತ್ತಾರೆ – ಜನರು ಗಂಗಾಸ್ನಾನಕ್ಕೆ ಇಳಿಯುವಾಗ ಪಾಪಗಳೆಲ್ಲ ಮರದ ಮೇಲೆ ಹೋಗಿ ಕೂತಿರುತ್ತವೆ. ಮಿಂದು ಮೇಲೆದ್ದ ಕೂಡಲೇ ಆ ಪಾಪಗಳೆಲ್ಲ ಆತನ ತಲೆಯ ಮೇಲೆ ಕೂತುಕೊಳ್ಳುತ್ತವೆ. ಹೃದಯಶುದ್ಧಿ ಇಲ್ಲದವನು ತೀರ್ಥನದಿಯಲ್ಲಿ ಸ್ನಾನ ಮಾಡುವುದಕ್ಕೂ ಸದಾಕಾಲ ಅದೇ ತೀರ್ಥದಲ್ಲಿ ಇರುವ ಮೀನು ಮೊಸಳೆಗಳಿಗೂ ಏನೂ ವ್ಯತ್ಯಾಸವಿಲ್ಲ. ಸರಳ ಬುದ್ಧಿಯವರಿಗೆ ಮಾತ್ರ ಭಗವಂತ ಒಲಿಯುತ್ತಾನೆ.

**ಅಮರನಾಥ ಯಾತ್ರೆ :** ಅಮರನಾಥ ಯಾತ್ರೆಯು ನನ್ನ ಜೀವನದಲ್ಲಿ ಅಮರವಾಗಿ ಸ್ಮರಣೆಯಲ್ಲಿರುವಂತದ್ದು. ಅದರ ಸಿಹಿ–ಕಹಿ ಅನುಭವಗಳಿಂದ! ಬಹುಶಃ ಇದನ್ನು ಗಜಪ್ರಸವ ಎಂದು ಹೇಳಿದರೂ ತಪ್ಪೇನಿಲ್ಲ! ಶ್ರೀಶ್ರೀ ಗುರುಮಹಾರಾಜರು ಹೇಳುತ್ತಾರೆ, ನೂಕಿ, ತಳ್ಳಿಸಿಕೊಂಡು ಗುದ್ದಾಡಿ ಹೇಗೋ ಮಾಡಿ ಗಂಗೆಯನ್ನು ಸ್ಪರ್ಶಿಸಿದರೆ ಸಾಕೆಂದು. ನಮ್ಮ ಅಮರನಾಥ ಯಾತ್ರೆಯೂ ಇದೇ ತರ!

ಅಮರನಾಥವು ಶ್ರೀನಗರದಿಂದ ಸುಮಾರು ೮೬ ಮೈಲಿ ದೂರದಲ್ಲಿದೆ. ಸಮುದ್ರ ಮಟ್ಟದಿಂದ ಹದಿಮೂರು ಸಾವಿರ ಅಡಿ ಮೇಲಿದೆ. ಅಮರನಾಥ ಗುಹೆಯು ನಿಸರ್ಗನಿರ್ಮಿತ. ಇಲ್ಲಿಯ ಶಿವಲಿಂಗ ಕೂಡ ನಿಸರ್ಗನಿರ್ಮಿತ. ಅಮರನಾಥ ಯಾತ್ರೆಯು ಅತ್ಯಂತ ಶ್ರೇಷ್ಠ ಮತ್ತು ಮುಕ್ತಿದಾಯಕ ಎಂಬುದು ಭಕ್ತರ ನಂಬಿಕೆ, ಶ್ರದ್ಧೆ. ಆದರೆ ಅತ್ಯಂತ ಕಠಿಣವಾದ ತೀರ್ಥಕ್ಷೇತ್ರ ಕೂಡ. ಕಡಿದಾದ, ದುರ್ಗಮವಾದ, ಸ್ವಲ್ಪ ಆ ಕಡೆ ಈ ಕಡೆ ದಾರಿ ತಪ್ಪಿ ಹೋದರೆ ಆಳ ಪ್ರಪಾತಕ್ಕೆ ಬೀಳುವ ಸಂಭವ. ಹೃದ್ರೋಗ, ಆಮ್ಲಜನಕದ ಸಮಸ್ಯೆಗಳಿದ್ದವರಿಗೆ ಈ ಯಾತ್ರೆ ಹೇಳಿದ್ದಲ್ಲ. ಸ್ವಾಮಿ ವಿವೇಕಾನಂದರು ಈ ಯಾತ್ರೆ ಮಾಡಿದ್ದರು. ಅವರಿಂದ ಈ ಗುಹೆ ಇನ್ನಷ್ಟು ಪೂತವಾಯಿತು.

ಜೂನ್ ೨೦೦೪ರಲ್ಲಿ ಅಮರನಾಥಯಾತ್ರೆ ಮಾಡಬೇಕೆಂದು ಸಂಕಲ್ಪಿಸಿ ಪರಮಪೂಜ್ಯ ಸ್ವಾಮಿ ಹರ್ಷಾನಂದಜಿಯವರನ್ನು ಕೇಳಿದೆ. ಅವರು ಆಶೀರ್ವಾದ ಮತ್ತು ಖರ್ಚುವೆಚ್ಚದ ಸಹಾಯ ಎರಡನ್ನೂ ಅನುಗ್ರಹಿಸಿದರು. ಆಗ ಜಮ್ಮುಕಾಶ್ಮೀರದಲ್ಲಿ ಮುಫ್ತಿ ಮಹಮ್ಮದ್ ಸಯೀದ್ ಮುಖ್ಯಮಂತ್ರಿ ಆಗಿದ್ದರೆಂದು ಕಾಣುತ್ತದೆ. ಯಾತ್ರೆಗೆ ಹೊರಡುವ ಎರಡು ತಿಂಗಳು ಮೊದಲೇ ಮಾಡಬೇಕಾದ ಎಲ್ಲ ಪತ್ರವ್ಯವಹಾರ, ಧರ್ಮಸ್ಥಳದ ಪೂಜ್ಯ ವೀರೇಂದ್ರ ಹೆಗ್ಗಡೆಯವರ (ಆಗ ಅವರು ಅಮರನಾಥ ವಿಶ್ವಸ್ಥ ಸಮಿತಿಯ ಸದಸ್ಯರು) ಪತ್ರ ತಯಾರಿ ಮಾಡಿದ್ದರೂ, ಶ್ರೀನಗರದಲ್ಲಿ ಅದರ ಪ್ರಯೋಜನವೇ ಆಗಲಿಲ್ಲ.

ನಾವು ಒಟ್ಟಿಗೆ ಐದು ಜನ ಇದ್ದೆವು. ನಾನು, ಪೂಜ್ಯ ಯತಾತ್ಮಾನಂದಜಿ, ಅವರ ಜೊತೆ ಒಬ್ಬ ಭಕ್ತ, ನನ್ನ ಜೊತೆ ಧೀರಜ್ ಮತ್ತು ಅರುಣ ಕುಮಾರ. ಬಂದದ್ದೇ ಬರಲಿ, ಗೋವಿಂದನ ದಯೆ ಇರಲಿ ಎಂದು ಧೃತಿಗೆಡದೆ ೨೧.೦೬.೨೦೦೪ರಂದು ಹೊರಟೇಬಿಟ್ಟೆವು. ದೆಹಲಿಯಲ್ಲಿ ನೋಡತಕ್ಕ ಸ್ಥಳಗಳನ್ನು ನೋಡಿ ೨೫.೦೬. ೨೦೦೪ ರಂದು ಜಮ್ಮು ರಾಮಕೃಷ್ಣ ಆಶ್ರಮ ಸೇರಿದೆವು. ಆಶ್ರಮದಲ್ಲಿ ಇನ್ನೂ ಆಶ್ಚರ್ಯ ಕಾದಿತ್ತು. ಬೇಲೂರು ಮಠದ ಮತ್ತು ಕಲ್ಕತ್ತಾದ ಕೆಲವು ಆಶ್ರಮಗಳಿಂದ ಸಾಧುಗಳು ಮತ್ತು ಸ್ವಯಂಸೇವಕರು ಕೂಡಿ ಇಪ್ಪತ್ತನಾಲ್ಕು ಜನ ಕುಳಿತಿದ್ದಾರೆ! ಅವರು ಆಗಲೇ ಅಲ್ಲಿ ಕೆಲವು ದಿನಗಳಿಂದ ಚಿಂತಾಕ್ರಾಂತರಾಗಿ ಠಿಕಾಣಿ ಹೂಡಿದ್ದಾರೆ; ಸರಕಾರದ ಅನುಮತಿಗಾಗಿ.

ನಾವು ಎಲ್ಲ ಒಟ್ಟಿಗೆ ೨೮.೦೬.೦೪ ರಂದು ಎರಡು ಬಾಡಿಗೆ ವಾಹನಗಳಲ್ಲಿ ಶ್ರೀನಗರಕ್ಕೆ ಪ್ರಯಾಣ ಬೆಳೆಸಿದೆವು. ಸುಮಾರು ಹನ್ನೆರಡು ಘಂಟೆ ಪ್ರಯಾಣ. ನನಗೆ ಅಮರನಾಥನ ದರ್ಶನ ವಾಗದಿದ್ದರೂ ಚಿಂತೆ ಇಲ್ಲ, ಜಮ್ಮುವಿನಿಂದ ಶ್ರೀನಗರದ ದಾರಿ ಯುದ್ದಕ್ಕೂ ಪ್ರಕೃತಿರಮಣೀಯ ದೃಶ್ಯಗಳನ್ನು ನೋಡಿ ಅಸ್ವಾದಿಸಿದೆ. ಪಚ್ಚೆ ಜರತಾರಿ ಉಟ್ಟ ಭೂರಮೆಯನ್ನು ಎಷ್ಟು ನೋಡಿದರೂ ಸಾಕಾಗದು. ರಸ್ತೆ ಇಕ್ಕೆಲಗಳಲ್ಲಿಯೂ ಬಂದೂಕುಧಾರಿ ಸೈನಿಕರು ನಿಂತಿದ್ದರು. ಭತ್ತದ ಗದ್ದೆಯ ಮಧ್ಯೆ, ಯಾವುದೋ ಮರದಡಿಯಲ್ಲಿ, ದಿಬ್ಬದ ಮೇಲೆ, ನೀರು, ಗಾಳಿ, ನೆರಳಿಲ್ಲದ ಬಿಸಿಲಲ್ಲಿ ದೇಶಕಾಯುವ ಸೈನಿಕರು. ಚಪರಾಸಿಗಳು ಆ ಸೈನಿಕರಿಗೆ ಅವರಿದ್ದ ಕಡೆಯಲ್ಲೇ ಬುತ್ತಿ ಕಟ್ಟಿಕೊಂಡು ಕೊಡುತ್ತಿದ್ದರು. ಸೈನಿಕರು ಆ ರೀತಿ ಕಷ್ಟಪಡುವುದರಿಂದ ಭಾರತದ ಪ್ರಜೆಗಳು ಸುಖವಾಗಿ ಓಡಾಡುತ್ತಿದ್ದಾರಲ್ಲವೇ!

ಕಾಶ್ಮೀರದಲ್ಲಿ ನಮಗೆ ಎಲ್ಲಿಯೂ ಹಿಂದೂ ಸಂಸ್ಕೃತಿ ಕಾಣಸಿಗದು. ಶ್ರೀನಗರದ ರಸ್ತೆಗಳಲ್ಲಿ ಅಲ್ಲಿಯ ಮುಸಲ್ಮಾನರು ನಮ್ಮನ್ನು ಕೇಳುತ್ತಿದ್ದರು 'ನೀವು ಭಾರತದಿಂದ ಬಂದಿದ್ದೀರಾ?'' ಅವರ ಪ್ರಶ್ನೆ ಕೇಳಿ, ನಮ್ಮ ದೇಶದ ಪರಿಸ್ಥಿತಿ ನೋಡಿ ಮನಸ್ಸಿಗೆ ಬಹಳ ದುಃಖವಾಯಿತು. ಶ್ರೀನಗರ ರಾಮಕೃಷ್ಣ ಆಶ್ರಮದ ಹಿಂದೆ ಕೆಲವು ಬಹು ಪುರಾತನ ಇಟ್ಟಿಗೆಗಳಿಂದ ಕಟ್ಟಿದ್ದ ದೊಡ್ಡದೊಡ್ಡ ಮನೆಗಳಿದ್ದವು. ನಾನು ಸಾಯಂಕಾಲ ತಿರುಗಾಡಿಕೊಂಡು ಆ ಕಡೆ ಹೋದರೆ, ಅಲ್ಲೊಬ್ಬ ಮುದುಕಿ (ಮುಸ್ಲಿಮ್), ''ಬಾಬಾ ಆ ಕಡೆ ಹೋಗಬೇಡಿ, ಯಾರೋ ಯಾವಾಗಲೋ ಬಂದು ನಿಮ್ಮನ್ನು ಹೊಡೆಯಬಹುದು!'' ಎಂದಳು! ಭಗವಂತನೇ ಆ ಮುಸ್ಲಿಮ್ ಮುದುಕಿಯ ರೂಪದಲ್ಲಿ ನಮ್ಮನ್ನು ರಕ್ಷಿಸಿದ. ಆ ಸಮಯದಲ್ಲಿ ಶ್ರೀನಗರದಲ್ಲಿ ಬೆರಳೆಣಿಕೆಯಷ್ಟು ಹಿಂದೂಗಳಿದ್ದರು.

ಸರಕಾರದಿಂದ ನಮಗೆ ಪಹಾಲ್‌ಗಾಂ ದಾರಿಯಿಂದ ಹೋಗಲು ಅನುಮತಿ ಸಿಗಲಿಲ್ಲ. ಹಾಗಾಗಿ ಸೈನ್ಯಾಧಿಕಾರಿಗಳ ಸಹಾಯದಿಂದ ಬಾಲ್‌ತಾಲ್ ದಾರಿಯಲ್ಲಿ ಒಂದೇ ದಿನದಲ್ಲಿ ಹೋಗಿ ಬರುವುದೆಂದು ಗೊತ್ತುಮಾಡಲಾಯಿತು.

೨೯.೦೬.೦೪ರಂದು, ಮಧ್ಯಾಹ್ನದ ಮೇಲೆ ನಾವು ಶ್ರೀನಗರದಿಂದ ಒಟ್ಟು ಮೂವತ್ತೆರಡು ಜನ ಹೊರಟೆವು. ಹದಿನಾರು ಜನ ಸಾಧುಗಳು ಮತ್ತು ೧೬ ಜನ ಸ್ವಯಂಸೇವಕರು. ನಗರ ಪ್ರದೇಶದಿಂದ ಹೊರಬಂದಾಗ ಕ್ಷೀರಭವಾನಿ ಗುಡಿ ಸಿಗುತ್ತದೆ. ಸ್ವಾಮೀಜಿ ಇಲ್ಲಿ ಕೆಲವು ದಿನ ತಮ್ಮ ಶಿಷ್ಯರೊಂದಿಗೆ ಇದ್ದರು. ಹಾಗಾಗಿ ರಾಮಕೃಷ್ಣ ಮಠದಲ್ಲಿ ಭಕ್ತರಿಗೆ ಕ್ಷೀರಭವಾನಿ ಬಹಳ ಪ್ರಮುಖ ಸ್ಥಾನ. ಶ್ರೀನಗರದಿಂದ ಸೋನಾಮಾರ್ಗ ತನಕ ಪ್ರಕೃತಿಯ ಸೊಬಗನ್ನು ಸವಿಯುವುದು ಆನಂದದಾಯಕ ವಿಚಾರ. ಎಲ್ಲಾ ಕಡೆ ಬಂದೂಕುಧಾರಿಗಳು ನಿಂತಿರುತ್ತಾರೆ. ಸಂಜೆ. ಆರು ಗಂಟೆಗೆ ನಮ್ಮ ಗಾಡಿಗಳು ಸೋನಾಮಾರ್ಗ ತಲುಪಿದವು. ಮಿಲಿಟರಿ ಅಧಿಕಾರಿಗಳ ಅನುಮತಿ ಪತ್ರಕ್ಕೆ ಜಮ್ಮು ಸರಕಾರದ ಪೋಲಿಸರು ಕವಡೆ ಕಾಸಿನ ಕಿಮ್ಮತ್ತು ಕೊಡಲಿಲ್ಲ. ಸೋನಾಮಾರ್ಗವು ಒಂದು ಚಿಕ್ಕ ಪೇಟೆ. ಕೆಲವು ಹೋಟೇಲ್‌ಗಳಿವೆ. ವಿಶಾಲವಾದ ಬಯಲು ಪ್ರದೇಶ. ಕಾರ್ಗಿಲ್ ಪರ್ವತ ಹತ್ತಿರ.

ಸೋನಾಮಾರ್ಗದಲ್ಲಿ ಕತ್ತಲಾಗುತ್ತಿದ್ದ ಹಾಗೆ ವಿಪರೀತ ಚಳಿ ಪ್ರಾರಂಭವಾಯಿತು. ಪೋಲೀಸರು ನಮ್ಮನ್ನು ಮುಂದುವರಿಯಲು ಬಿಡಲಿಲ್ಲ. ಸಾಧುಗಳು ಅಂಗಲಾಚಿ ಬೇಡಿಕೊಂಡರು ಪೋಲೀಸರು ಒಂದಿನಿತೂ ಕರುಣೆ ತೋರಲಿಲ್ಲ. ನಮ್ಮ ಎದುರುಗಡೆಯಿಂದ ಎಷ್ಟೋ ಜನರು ಹೋಗುವುದು ಬರುವುದು ನಡೆಯುತ್ತಿತ್ತು; ಅವರೆಲ್ಲ ಯಾತ್ರಿಗಳು. ನಾವು ಪ್ರತಿಯೊಬ್ಬರೂ ೨೦೦೦/- ಲಂಚ ಕೊಡಬೇಕೆಂದರು. ಅಷ್ಟು ಕೊಟ್ಟರೆ ಬಿಡುತ್ತಾರೆ. ನಾವು ಲಂಚ ಕೊಡಲು ತಯಾರಿಲ್ಲ. ಪುನಃ ಶ್ರೀನಗರದ ಪರಿಚಯದ ಮಿಲಿಟರಿ ಅಧಿಕಾರಿಗಳಿಗೆ ದೂರವಾಣಿ ಮೂಲಕ ನಡೆದ ವಿಚಾರ ಹೇಳಿದೆವು. ಅವರು ಬಾಲ್‌ತಾಲದ ಮಿಲಿಟರಿ ಕ್ಯಾಂಪಿಗೆ ಹೇಳಿ, ಬಾಲ್‌ತಾಲ್‌ನಿಂದ ಒಬ್ಬ ಇಂಜಿನಿಯರ್ ಬಂದು ಮಿಲಿಟರಿ ಟ್ರಕ್ಕನ್ನು ಸೋನಾಮಾರ್ಗಕ್ಕೆ ತಂದರು. ಆದರೆ ಕಷ್ಟ ಇಲ್ಲಿಯೂ ಕೊನೆಗೊಳ್ಳಲಿಲ್ಲ. ಮುಸ್ಲಿಮ್ ಪೋಲೀಸರು ಮುಂದುವರಿಯಲು ಬಿಡಲಿಲ್ಲ. ಅನಂತರ ಶ್ರೀನಗರದಿಂದ ಇನ್ನೊಂದು ಸಂದೇಶ ಬಂತು. ಇವರುಗಳೆಲ್ಲ ಕೂಲಿಗಳು, ರಸ್ತೆ ಕಾಮಗಾರಿಗೆ ಕರೆದುಕೊಂಡು ಹೋಗುತ್ತಿದ್ದೇವೆ. ಮಿಲಿಟರಿ ಅಧಿಕಾರಿ ಒಬ್ಬರು ನಮಗೆ ಹೇಳಿದರು, ಸಾಧುಗಳು ಎಲ್ಲ ಬೇರೆ ಬಟ್ಟೆ ಹಾಕಿ ಕಾವಿಯನ್ನು ಮುಚ್ಚಬೇಕು ಎಂದು. ಅಷ್ಟರೊಳಗೆ ಉಗ್ರಾಣದಂತಿರುವ ಇನ್ನೊಂದು ಮಿಲಿಟರಿ ಟ್ರಕ್ ಬಂದು ನಮ್ಮ ಮುಂದೆ ನಿಂತಿತು. ಸಾಧುಗಳೆಲ್ಲ ಅವರಿವರ ಇಜಾರ, ಪ್ಯಾಂಟ್, ಶರ್ಟ್ ಎಲ್ಲ ಹಾಕಿ ಥೇಟ್ ಕೂಲಿಯಾಳುಗಳ ಹಾಗೆ ವೇಷ ಬದಲಾಯಿಸಿದರು. ನನ್ನ ಹತ್ತಿರ ಒಂದು ರೈನ್‌ಕೋಟ್ ಇತ್ತು. ಅದರಿಂದಲೇ ನಖಶಿಖಾಂತ ಮುಚ್ಚಿಬಿಟ್ಟೆ! ಟ್ರಕ್ ಎಂಬ ಗೋದಾಮಿನೊಳಗೆ ನಾವೆಲ್ಲ ಹೊಕ್ಕೆವು. ಟ್ರಕ್‌ನ ಎದುರು ಮತ್ತು ಹಿಂದಗಡೆ ನಾಲ್ಕು ಜನ ಕೋವಿಧಾರಿಗಳು. ಟ್ರಕ್ ನೊಳಗೆ ಧೂಳು ಮಣ್ಣು ಬೂದಿ ಎಲ್ಲವೂ ಇತ್ತು. ನಾವೆಲ್ಲ ಕುಕ್ಕುರಗಾಲಿನಲ್ಲಿ ಕೂತೆವು. ಕೊನೆಯ ಚೆಕ್‌ಪೋಸ್ಟಿನಲ್ಲಿ ಪೋಲೀಸರು ನಮ್ಮ ಟ್ರಕ್ ತನಿಖೆ ಮಾಡಿದರು. ಮಿಲಿಟರಿ ಕಾಗದದ ಪ್ರಕಾರ ಕೂಲಿಯಾಳುಗಳು! ಅಲ್ಲಿಂದ ಮುಂದೆ ಪೋಲೀಸರಿಗೆ ಅಧಿಕಾರವಿಲ್ಲ. ಪೋಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ನಾವು ಪಾರಾದೆವು! ಹಾಗೂ ಹೀಗೂ ರಾತ್ರಿ ಹನ್ನೊಂದು ಘಂಟೆಗೆ ನಾವು ಬಾಲ್‌ತಾಲ್

ಮಿಲಿಟರಿ ಶಿಬಿರವನ್ನು ಮುಟ್ಟಿದೆವು. ಮಿಲಿಟರಿ ಶಿಬಿರದಲ್ಲಿ ನಮಗೆ ಬಿಸಿಬಿಸಿ ಖಿಚುಡಿ ಉಣಬಡಿಸಿದರು. ಚಳಿತಡೆಯಲು ಹೆಣ ಭಾರದ, ಕಾಲಿನಿಂದ ತಲೆತನಕ ಮುಚ್ಚುವ, ಜೀವನದಲ್ಲಿ ಯಾವತ್ತೂ ನೋಡದ, ಸ್ಲೀಪಿಂಗ್ ಬ್ಯಾಗುಗಳನ್ನು ಕೊಟ್ಟರು! ಸೈನಿಕರು ನಮಗೆ ರಾತ್ರಿ ಎಚ್ಚರಿಕೆ ಕೊಟ್ಟರು – ರಾತ್ರಿ ಹೊರಗಡೆ ಹುಲಿ ಚಿರತೆಗಳು ತಿರುಗಾಡುತ್ತಿರುತ್ತವೆ ಎಂದು. ಬಹುಶಃ ಪಾಕ್‌ನ ಭಯೋತ್ಪಾದಕರೂ ಕೂಡ ಇರಬಹುದು. ಮಿಲಿಟರಿಯವರು ಮಾಡಿದ ಸೇವೆಯನ್ನು ನಾವು ಈ ಜೀವನದಲ್ಲಿ ಮರೆಯುವ ಹಾಗಿಲ್ಲ. ಅವರಿಗೆ ನಮ್ಮ ಗುಂಪಿನಲ್ಲಿರುವವರೆಲ್ಲ ಚಿರಋಣಿಗಳಾಗಿರುತ್ತಾರೆ. ಹಾಗೂ ಹೀಗೂ ಬೆಳಗಾಯಿತು ನೋಡಿ!

ಇವತ್ತು ೩೦-೦೬-೦೪, ನಮಗೆ ಪವಿತ್ರವಾದ ಅಮರನಾಥನ ದರ್ಶನವಾಗಬೇಕು. ಬಾಲ್‌ತಾಲ್ ಮಿಲಿಟರಿ ಕ್ಯಾಂಪಿನಿಂದ ಡೊಮೈಲ್ ಎಂಬ ಜಾಗಕ್ಕೆ ಹೋಗಬೇಕು. ಅಲ್ಲಿಂದ ಬೆಟ್ಟ ಹತ್ತಲು ಪ್ರಾರಂಭ. ಮಿಲಿಟರಿಯವರು ಅವರ ಟ್ರಕ್ಕಿನಲ್ಲಿ ನಮ್ಮನ್ನು ಡೊಮೈಲ್‌ಗೆ ತಂದು ಬಿಟ್ಟರು. ಇಪ್ಪತ್ತು ನಿಮಿಷ ಹಿಡಿಯಿತು. ನಮ್ಮ ಗುಂಪಿನಲ್ಲಿ ಕೆಲವರು ಕುದುರೆ (ಪೋನಿ) ಹುಡುಕಲು ಆರಂಭಿಸಿದರು. ಕಡಿದಾದ, ನೇರ ಪರ್ವತವನ್ನು ಏರಲು ಕೆಲವರಿಗೆ ಕುದುರೆ ಬೇಕಿತ್ತು. ಆದರೆ ಕುದುರೆಗಳ ಸಂಖ್ಯೆ ಬಹಳ ಕಡಿಮೆ. ಅಲ್ಲಿ ಆವಾಗಲೇ ಸುಮಾರು ಮೂರು ಸಾವಿರದಷ್ಟು ಜನ ಇದ್ದರು. ನಾವು ಪೋಲೀಸರಿಗೆ ಲಂಚ ಕೊಡದೆ ಹೋದವರು. ಉಳಿದವರು ಲಂಚಕೊಟ್ಟು ಹೋದವರು!

ನನಗೆ ಕುದುರೆಯ ಆವಶ್ಯಕತೆ ಇರಲಿಲ್ಲ, ಕೆಲವರು ಕುದುರೆಗಾಗಿ ಕಾದರು. ಅಷ್ಟರೊಳಗೆ ಬೆಳಗ್ಗೆ ೭-೩೦ ಆಯಿತು. ನಾನು ಸಮಯ ವ್ಯರ್ಥ ಬೇಡ ಎಂದು ಬೆಟ್ಟ ಏರಲು ಆರಂಭಿಸಿದೆ. ನನ್ನ ಜೊತೆ ಇದ್ದ ಧೀರಜ್, ಅರುಣ್‌ಕುಮಾರ ಇಬ್ಬರೂ ನನ್ನನ್ನು ಹಿಂಬಾಲಿಸಿದರು. ಇನ್ನು ಕೆಲವರು ಕುದುರೆ ದುಬಾರಿ ಎಂದು ಪರ್ವತ ಏರಲು ಉಪಕ್ರಮಿಸಿದರು. ದಾರಿಯಲ್ಲಿ ಅಲ್ಲಲ್ಲಿ ಸೈನಿಕರ ಶಿಬಿರಗಳು; ಅವರೇ ನಮ್ಮ ದೈವಸ್ವರೂಪಿಗಳು. ರಾತ್ರಿ ಮಳೆ ಬಂದು ದಾರಿಯುದ್ದಕ್ಕೂ ಕೆಸರು. ಕೆಲವು ಕಡೆ ಅತಿ ಕಷ್ಟಪಟ್ಟು ಮೇಲೇರಬೇಕು. ಮುಂದು ಮುಂದು ಹೋದಂತೆ ಸಮತಟ್ಟಾದ ರಸ್ತೆ ಇದೆ. ಧೀರಜನು ದಾರಿಯಲ್ಲಿ ಒಂದು ಕುದುರೆ ಸಿಕ್ಕಿತೆಂದು ಹತ್ತಿದನು. ಅದು ಬಹಳ ತುಂಟ ಕುದುರೆಯಾದುದರಿಂದ ಅದನ್ನು ನಿಭಾಯಿಸಲು ಕುದುರೆ ಸಾಬಿಯಿಂದಲೂ ಆಗುತ್ತಿರಲಿಲ್ಲ; ಹಾಗೆಯೇ ಅದನ್ನು ಹತ್ತಿ ಅದನ್ನು ಬಿಡಬೇಕಾಯಿತು. ಅವನಿಗೆ ಕಾಲು ನೋವು ಬಂದಿದ್ದರಿಂದ ಪುನಃ ಇನ್ನೊಂದು ಕುದುರೆ ಸಿಕ್ಕಿತು. ಅದನ್ನು ಹತ್ತಿ ಮುಂದುವರಿದ. ನಾವು ಮುಂದುವರಿದ ಹಾಗೆ ನಮ್ಮ ಗುಂಪಿನವರು ಮರೆಯಾಗುತ್ತಾ ಬಂದರು. ನಮ್ಮೊಳಗೆ ಒಬ್ಬ ಸ್ವಾಮಿಗಳಿದ್ದರು. ಅವರ ಭಾರ ನೂರು ಕಿಲೋಗಿಂತಲೂ ಅಧಿಕ. ಅವರು ಒಂದು ಕುದುರೆ ಹತ್ತಿದರು. ಕುದುರೆ ಬಹಳ ಪ್ರಯಾಸದಿಂದ ಮುಂದುವರಿಯಿತು. ದಾರಿಯಲ್ಲಿ ಒಂದು ದಿಬ್ಬ ಹತ್ತುವಾಗ ಕುದುರೆ ಸಹಿತ ಸ್ವಾಮಿಗಳು ಉರುಳಿದರು.

ನಾವೆಲ್ಲರೂ ಖಾಲಿ ಹೊಟ್ಟೆಯಲ್ಲಿದ್ದೆವು. ಬೆಟ್ಟ ಹತ್ತುವವರು ಸಂಪೂರ್ಣ ಖಾಲಿ ಹೊಟ್ಟೆಯಲ್ಲಿರಬಾರದು: ಅದರಿಂದ ವಾಂತಿ ಬರುವ ಸಂಭವ ಇರುತ್ತದೆ. ದಾರಿಯಲ್ಲಿ ಸಿಕ್ಕಿದ ಫ್ರೂಟ್ ಮತ್ತು ಸ್ವಲ್ಪ ಒಣ ಹಣ್ಣುಗ್ಗಳನ್ನು ತಿಂದು ಮುಂದುವರಿದ ಹಾಗೆ ಕುದುರೆ ಏರಿದ ಧೀರಜನು ಹಿಂದುಳಿದ, ಅರುಣನ ನಡಿಗೆ ನಿಧಾನವಾಯಿತು. ಕೊನೆಗೆ ನಮ್ಮ ಗುಂಪಿನಲ್ಲಿರುವವರಲ್ಲಿ ನಾನೊಬ್ಬನೆ ಮುಂದುವರಿದೆ. ಮಿಲಿಟರಿಯವರು, ಭಕ್ತರು ದಾರಿಯಲ್ಲಿ ತುಂಬಾ ಜನ ಹೋಗುತ್ತಿದ್ದರು. ಎಲ್ಲರಿಗೂ ಒಂದು ಉತ್ಸಾಹ, ಹುಮ್ಮಸ್ಸು. ಎಲ್ಲರೂ 'ಬಾಬಾ ಅಮರನಾಥ್ ಕೀ ಜೈ' ಎಂದು ಜೈಕಾರ ಹಾಕುತ್ತಾ ಹೋಗುತ್ತಾರೆ. ಭಾಗ್ಯಕ್ಕೆ ಆ ದಿನ ಬಿಸಿಲು ಚೆನ್ನಾಗಿತ್ತು, ಮಳೆ ಬರುತ್ತಿರಲಿಲ್ಲ. ಬಹುಶಃ ಅರ್ಧದಾರಿ ಕ್ರಮಿಸಿದ ಮೇಲೆ ಬಹುದೂರದಲ್ಲಿ ಒಬ್ಬ ನೀರನ್ನು ಹೊತ್ತುಕೊಂಡು ಹೋಗುವುದನ್ನು ನೋಡಿದ ನಾನು ಲೆಕ್ಕಾಚಾರ ಹಾಕಿದೆ, ಅದು ಒಳದಾರಿ ಇರಬಹುದೆಂದು. ನಾನು ನನ್ನ ಅತಿ ಬುದ್ಧಿವಂತಿಕೆ ತೋರಿಸಿಕೊಳ್ಳಲು ಎಲ್ಲರೂ ಹೋಗುವ ದಾರಿ ಬಿಟ್ಟು ಇನ್ನೊಂದು ಕವಲು ದಾರಿ ಹಿಡಿದೆ! ಗಂತವ್ಯ ಸ್ಥಾನವನ್ನು ಆದಷ್ಟು ಬೇಗ ಗಮನಿಸಬೇಕಲ್ಲವೇ. ಆದರೆ ದಾರಿಯಲ್ಲಿ ಹೋಗುತ್ತಿದ್ದ ಹಾಗೆ ಕಣ್ಣೆದುರಿಗೆ ಒಂದೇ ಸಲ ದೊಡ್ಡ ಪ್ರಪಾತ! ಕೆಳಗೆ ಬಿದ್ದರೆ ಇನ್ನೂರು ಅಡಿ ಕೆಳಗೆ! ಮುಂದೆ ಹೋಗುವ ಹಾಗಿಲ್ಲ, ಹಿಂದಕ್ಕೆ ಹೋದರೆ ಇನ್ನೂ ೩೦ ನಿಮಿಷ ವ್ಯರ್ಥ. ಮೇಲುಗಡೆ ರಸ್ತೆಯಲ್ಲಿ ಜನ ಹೋಗುವುದನ್ನು ನೋಡುತ್ತಿದ್ದೆ. ಕೆಳಗೆ ಪ್ರಪಾತಕ್ಕೆ ಬೀಳುತ್ತಿದ್ದರೆ ಇವತ್ತು ನಿಮಗೆ ಈ ಲೇಖನ ಸಿಗುತ್ತಿರಲಿಲ್ಲ! ಮೇಲುಗಡೆ ರಸ್ತೆಗೆ ನಾನು ತೆವಳಿಕೊಂಡೆ ಸಾಗಬೇಕು. ಅದು ಸುಮಾರು ೬೦ ಡಿಗ್ರಿ ಕೋನ ಇಳಿಜಾರು! ನನ್ನ ನೀರಿನ ಬಾಟ್ಲಿ ಮತ್ತು ಹೆಗಲು ಚೀಲ (ಅದರೊಳಗೆ ಏನೂ ಇರಲಿಲ್ಲ) ತಲೆಗೆ ಸುತ್ತಿಕೊಂಡೆ. ಊರುಗೋಲನ್ನು ಹಿಂದುಗಡೆ ಧೋತಿ ಒಳಗೆ ತೂರಿಸಿ, ಕೋತಿ ತರಹ ಎರಡು ಕಾಲು, ಎರಡು ಕೈಗಳನ್ನು ಉಪಯೋಗಿಸಿ ಮೇಲೇರಿದೆ. ಅಲ್ಲಿ ಎಲ್ಲ ಚಿಕ್ಕ ಚಿಕ್ಕ ಕುರುಚಲು ಪೊದೆಗಳು. ಬಹುಶಃ ನೆಲದಿಂದ ಅರ್ಧ ಅಡಿ ಉದ್ದ. ಆ ಕುರುಚಲು ಗಿಡಗಳೇ ನನ್ನ ಆಧಾರ. ಹಿಂದೆಲ್ಲೋ ಗ್ರಂಥದಲ್ಲಿ ಓದಿದ್ದೆ; ಇಂತಹ ಕುರುಚಲು ಗಿಡಗಳೊಳಗೆ ವಿಷದ ಹಾವುಗಳಿರುತ್ತವೆಂದು. ಅದೂ ಈ ಕ್ಷಣದಲ್ಲಿ ನೆನಪಿಗೆ ಬಂತು. ಹಾಗೂ ಹೀಗೂ ಎಲ್ಲರೂ ನಡೆಯುವ ರಸ್ತೆಯತ್ತ ತಲುಪಿದೆ. ಬದುಕಿದೆಯಾ ಬಡಜೀವ, ಇನ್ನೆಂದೂ ಅಡ್ಡದಾರಿ ಹಿಡಿಯಬೇಡ ಎಂದು ನನ್ನ ಮನಸ್ಸಿಗೆ ಹೇಳಿದೆ. ಇಷ್ಟೆಲ್ಲ ಆದರೂ ನನ್ನ ಜೊತೆಗಾರರು, ನಮ್ಮ ಗುಂಪಿನವರು ಯಾರೂ ಕಾಣುತ್ತಿಲ್ಲ! ಮುಂದೆ ಸಮತಟ್ಟಾದ ಜಾಗ, ಅನಂತರ ಮರಳಿನ ಕಣಗಳ ಹಾಗೆ ಹಿಮ ಹರಡಿದ ರಸ್ತೆ. ಕೆಲವು ಕೂಲಿಯಾಳುಗಳು ಹಿಮವನ್ನು ಸರಿಸಿ ಯಾತ್ರಿಗಳಿಗೆ ದಾರಿ ಮಾಡಿ ಕೊಡುತ್ತಿದ್ದರು. ಸಕ್ಕರೆ ಚೆಲ್ಲಿದಂತೆ ಹಿಮ ಕಾಣಿಸುತ್ತಿತ್ತು. ಬಿಸಿಲಿಗೆ ಹಿಮಕರಗಿ ಜನರು ಜಾರಿ ಬೀಳುತ್ತಿದ್ದರು. ತೊರೆಗಳಲ್ಲಿ ನೀರು ಮಂಜುಗಡ್ಡೆಯಾಗಿತ್ತು. ಎರಡೂ ಕೈಗಳಲ್ಲಿ ಕೋಲುಗಳಿದ್ದರೆ ಜಾರಿ ಬೀಳದೆ ನಡೆಯಬಹುದು. ಅಷ್ಟರೊಳಗೆ ಅಮರನಾಥ ಗುಹೆಯ ಎದುರುಬಂದೆ.



ಬೆಳಿಗ್ಗೆ ೧೧.೨೦ಕ್ಕೆ ಗುಹೆಯ ಮುಂದೆ. ಈ ಗುಹೆಗೆ ಮೇಲೇರಲು ಸುಮಾರು ಐವತ್ತು ಮೆಟ್ಟಿಲುಗಳು. ಮೆಟ್ಟಿಲುಗಳು ಬಹಳ ದೊಡ್ಡದು. ಇಲ್ಲಿಯ ತನಕ ಆಗದ ಕಷ್ಟ ಆ ಮೆಟ್ಟಿಲು ಹತ್ತುವಾಗ ಆರಂಭವಾಯಿತು. ಒಂದು ಮೆಟ್ಟಿಲಿನಿಂದ ಮತ್ತೊಂದು ಮೆಟ್ಟಿಲೇರುವಾಗ ನನ್ನ ಕಾಲು ಹತ್ತು ಮಣ ಭಾರ ಎನ್ನುವ ಹಾಗಿತ್ತು! ಕೊನೆಗೂ ಹಿಮಲಿಂಗದ ಎದುರು ಹೋಗಿ ನಿಂತೆ. ಅದು ಪರಮಾನಂದ, ವರ್ಣಿಸಲಸದಳ. ಭಾವದಿಂದ ಅಲ್ಲಿ ಕೆಲವು ಹೊತ್ತು ನಿಂತೆ. ಸುಮಾರು ಎಂಟು ಅಡಿ ಉದ್ದದ ಅಮರನಾಥ ಲಿಂಗ. ಅದನ್ನು ಸ್ಪರ್ಶ ಮಾಡಲು ಬಿಡುವುದಿಲ್ಲ. ಇಲ್ಲಿ ಅರ್ಚಕರು ಸೈನಿಕರೆ. ಈ ಗುಹೆಯೊಳಗಿಂದ ಒದು ಝರಿ ಕೆಳಗೆ ಇಳಿಯುತ್ತದೆ. ಗುಹೆಯ ಕೆಳಗೆ ಅದು ತೊರೆಯಾಗಿ ಹರಿಯುತ್ತದೆ. ಇದನ್ನು ಅಮರಗಂಗಾ ಎನ್ನುವರು. ಭಕ್ತರು ಇಲ್ಲಿ ಸ್ನಾನ ಮಾಡುತ್ತಾರೆ. ನೂಕು ನುಗ್ಗಲು ಇಲ್ಲವೆ ಇಲ್ಲ; ನಾನು ಕೆಲವು ಹೊತ್ತು ಹಾಗೆಯೆ ನಿಂತಿದ್ದೆ. ಮನಸ್ಸು ಕೆಲಸ ಮಾಡದಿದ್ದರೂ ಪ್ರಾರ್ಥನೆ... ಬಂತು! ಇಲ್ಲಿ ಮರದ ಹಾವುಗೆ ಇಟ್ಟಿರುತ್ತಾರೆ, ಗುಹೆಯೊಳಗೆ ಹೋಗಲು. ಭಯೋತ್ಪಾದಕರ ಆತಂಕ ಯಾವಾಗಲೂ ಇದ್ದೇ ಇರುತ್ತದೆ. ಹೆಣಭಾರವಾಗಿದ್ದ, ಈ ಶರೀರದ ಕಷ್ಟವೆಲ್ಲ ಅಮರನಾಥನ ಎದುರು ನಿಂತಾಗ ಹೊರಟೇ ಹೋಗಿತ್ತು. ಇಲ್ಲಿ ಬಿಳಿ ಪಾರಿವಾಳಗಳ ಬಗ್ಗೆ ಬರೆಯುವುದಿಲ್ಲ. ಪ್ರಾಜ್ಞರು ಹೇಳುತ್ತಾರೆ, ಮಾತೆಯು ತನ್ನೊಡಲಿನಲ್ಲಿ ಕಂದನನ್ನು ಒಂಬತ್ತು ತಿಂಗಳು ಹೊತ್ತು, ಪ್ರಸವ ಕಾಲದಲ್ಲಿ ಸಾಕಷ್ಟು ವೇದನೆಯನ್ನು ಅನುಭವಿಸಿ, 'ಸಾಕಪ್ಪಾ ಈ ಸಂಸಾರ', ಎನ್ನುವಾಗ ತನ್ನ ಕಂದನನ್ನು ನೋಡಿ ಸಂತೋಷದಿಂದ ತನ್ನೆಲ್ಲ ಕಷ್ಟಗಳನ್ನು ಮರೆಯುತ್ತಾಳಂತೆ. ಹಾಗೆ ಮಹಾದೇವನ ಮುಂದೆ ದೇಹದ ಎಲ್ಲ ಕಷ್ಟಗಳನ್ನು ಮರೆತಿದ್ದೆ.

ನಾನು ಗುಹೆಯಿಂದ ಕೆಳಗಿಳಿದು ಆಕಾಶದ ಕೆಳಗಡೆ ಕೈಕಾಲು ಚಾಚಿ ಬಿದ್ದುಕೊಂಡಿದ್ದೆ. ಸೂರ್ಯನೂ ಪ್ರಖರವಾಗಿರಲಿಲ್ಲ. ಅಷ್ಟರೊಳಗೆ ನನ್ನ ಸಹಯಾತ್ರಿಕರಿಬ್ಬರು ಗುಹೆಯೊಳಗೆ ಹೋದರು. ನಮ್ಮ ಗುಂಪಿನವರು ಮಧ್ಯಾಹ್ನ ೧೨.೩೦ರ ನಂತರ ಕುದುರೆಯ ಮೂಲಕ ಒಬ್ಬೊಬ್ಬರೇ ಬಂದು ಸೇರತೊಡಗಿದರು. ನಾನು ಸ್ವಲ್ಪ ಒಣಹಣ್ಣು, ಸೇಬು ತಿಂದು, ನೀರು ಕುಡಿದು ಜಠರ ಉಪಶಮನ ಮಾಡಿಕೊಂಡೆ. ಅಷ್ಟರಲ್ಲಿ ನನ್ನ ಜೊತೆಗಾರ ಅರುಣನಿಗೆ ಆಮ್ಲಜನಕದ ಅಭಾವದಿಂದ ತಲೆನೋವು ಪ್ರಾರಂಭವಾಯಿತು. ಆತನನ್ನು ಲಗುಬಗೆಯಿಂದ ಕೆಳಗಿಳಿಯಲು ಹೇಳಿದೆ. ನಾನು ಅಲ್ಲಿಯೆ ಒಂದು ಘಂಟೆ ವಿಶ್ರಾಂತಿ ಪಡೆದುಕೊಂಡೆ.

ಮಧ್ಯಾಹ್ನ ಒಂದು ಘಂಟೆಯ ನಂತರ ನಾನು ನಿಧಾನವಾಗಿ ಕೆಳಗಿಳಿಯಲು ಪ್ರಾರಂಭ ಮಾಡಿದೆ. ನಮ್ಮ ಗುಂಪಿನಲ್ಲಿ ಕೆಲವರು ಇನ್ನೂ ಬಾಕಿ ಇದ್ದರು. ಕುದುರೆಯಿಂದ ಉರುಳಿದ ಸ್ವಾಮಿಗಳು ೩.೩೦ಕ್ಕೆ ಮೇಲೇರಿದರು. ಕೆಳಗಿಳಿಯುವಾಗ ಹೆಚ್ಚಿನ ವಿಶ್ರಾಂತಿ ತೆಗೆದುಕೊಳ್ಳುತ್ತ ಬಂದೆ. ಇಳಿಜಾರಿನಲ್ಲಿ ಇಳಿಯುವಾಗ ಎರಡು ಕೋಲುಗಳ ಆಧಾರ ಬೇಕಾಗುತ್ತದೆ. ಸಂಜೆ ನಾಲ್ಕು ಘಂಟೆಗೆ ಡೊಮೈಲ್ ತಲುಪಿದೆ. ಅಲ್ಲೊಂದು ಸಾಬಿಯ ಹೋಟೆಲ್ ಎಂದು ಕರೆಸಿಕೊಳ್ಳುವ ಜಗಲಿ ಮೇಲೆ ಕೂತೆ. ಐದು ರೂಪಾಯಿಗೆ ಆ ಸಾಬಿಯು ಚಹಾ ಎನ್ನುವ ಬಿಸಿನೀರು ಕೊಟ್ಟ! ನಾನು ಅಲ್ಲಿ ಸ್ವಲ್ಪ ವಿಶ್ರಾಂತಿ ಪಡೆದ ನಂತರ ಧೀರಜನು ಕುದುರೆಯಿಂದ ಬಂದಿಳಿದ. ನನಗಿಂತ ತುಂಬಾ ಮೊದಲೇ ಹೊರಟಿದ್ದ ಅರುಣನು ಅನಂತರ ಬಂದು ಸೇರಿದ. ಸಂಜೆ ಐದರ ಸಮಯಕ್ಕೆ ಮಿಲಿಟರಿ ಟ್ರಕ್ ಬಂದು ನಿಂತಿತು, ನಮ್ಮನ್ನು ಕರೆದುಕೊಂಡು ಹೋಗಲು. ಐದೂವರೆ ನಂತರ ಬಳಲಿ ಬೆಂಡಾದ ಒಬ್ಬೊಬ್ಬರೇ ಬಂದು ಸೇರತೊಡಗಿದರು. ಹೀಗೆ ರಾತ್ರಿ ಒಂಬತ್ತು ಘಂಟೆಗೆ ಒಬ್ಬರು ಬಿಟ್ಟು ನಾವೆಲ್ಲ ಒಟ್ಟಾದೆವು.

ಈ ಮೊದಲೇ ತಿಳಿಸಿದಂತೆ ಕುದುರೆಯಿಂದ ಉರುಳಿದ ಸ್ವಾಮಿಗಳು ಕೆಳಗೆ ಬರಲೇ ಇಲ್ಲ. ಅವರು ಕೆಳಗೆ ಬಾರದೆ ನಮ್ಮನ್ನು ದೊಡ್ಡ ಸಮಸ್ಯೆಗೆ ಹಾಕಿದರು. ತೀರ್ಥಯಾತ್ರಿಗಳ ರಕ್ಷಣೆ ಸೈನಿಕರ ಕೈಯಲ್ಲಿದ್ದುದರಿಂದ ಸಂಜೆ ಐದು ಘಂಟೆಯ ನಂತರ ಭಕ್ತರು ಎಲ್ಲೆಲ್ಲಿ ಇದ್ದರೋ ಅಲ್ಲಿ ಶಿಬಿರದಲ್ಲಿ ತಂಗಬೇಕು. ಹಾಗಾಗಿ ನಮ್ಮ ತಪ್ಪಿಸಿಕೊಂಡ ಸ್ವಾಮಿಗಳು ಮಿಲಿಟರಿ ಕ್ಯಾಂಪಿನಲ್ಲಿ ಗಡದ್ದಾಗಿ ಉಂಡು ಅಲ್ಲಿಯೇ ನಿದ್ದೆಹೋಗಿದ್ದಾರೆ! ಈ ಒಬ್ಬರಿಂದಾಗಿ ನಾವು ಆ ದಿನ ಶ್ರೀನಗರಕ್ಕೆ ಹೋಗಲಾಗಲಿಲ್ಲ. ನಾವು ಪುನಃ ಹಿಂದಿನ ರಾತ್ರಿ ತಂಗಿದ್ದ ಬಾಲ್‌ತಾಲ್ ಶಿಬಿರಕ್ಕೆ ಬಂದು ಅಲ್ಲಿಯೆ ಅವರು ಕೊಟ್ಟ ಖಿಚುಡಿ ತಿಂದು ಉರುಳಿದೆವು. ನಮ್ಮಿಂದ ಸೈನಿಕರಿಗೆ ಆ ದಿನ ಸ್ವಲ್ಪ ಕಷ್ಟವೇ ಆಯಿತು.

೧.೦೭.೨೦೦೪ರಂದು ಮಿಲಿಟರಿ ಟ್ರಕ್‌ನಿಂದ ೭:೩೦ಕ್ಕೆ ಹೊರಟು ಸೋನಾಮಾರ್ಗಕ್ಕೆ ಬಂದೆವು. ನಮ್ಮ ಬಾಡಿಗೆ ವಾಹನಗಳು ಅಲ್ಲಿಯೆ ಇದ್ದವು. ಅಲ್ಲಿಂದ ಮಧ್ಯಾಹ್ನ ೧೨:೩೦ಕ್ಕೆ ಶ್ರೀನಗರ ಆಶ್ರಮಕ್ಕೆ ತಲುಪಿದೆವು. ನಮ್ಮ ಗುಂಪಿನಿಂದ ತಪ್ಪಿಸಿಕೊಂಡ ಸ್ವಾಮಿಗಳು ಆ ದಿನ ಸಂಜೆ ನಾಲ್ಕು ಘಂಟೆಗೆ ಶ್ರೀನಗರದ ನಮ್ಮ ಆಶ್ರಮ ಸೇರಿದರು. ಶ್ರೀನಗರದಲ್ಲಿ ದಾಲ್‌ಲೇಕ್, ಶಂಕರ ಪರ್ವತ, ಜ್ಯೇಷ್ಠಾದೇವಿ, ಶಾರಿಕಾದೇವಿ, ಹರಿಪರ್ವತ, ಭವಾನಿ ಆಶ್ರಮ ಇತ್ಯಾದಿಗಳನ್ನು ದರ್ಶಿಸಿದೆವು.